# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ವಾರ್ಡ್ 93, ವಸಂತನಗರ
## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:07-08-2021 ರಂದು 1ನೇ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್ (ಚುನಾವಣೆ) ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಮಾನ್ಯ ನೋಡೆಲ್ ಅಧಿಕಾರಿಗಳು ವಿ.ಸಿ ಮುಖಾಂತರ ಸಭೆಯನ್ನು ನಡೆಸಿಕೊಟ್ಟರು ಹಾಗೂ ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು,

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೆಲ್ ಸಂಖ್ಯೆ |
|---|---|---|---|
| 1 | ಶ್ರೀಮತಿ. ಆರ್. ಮಂಜುಳಮ್ಮ | ನೋಡಲ್ ಆಧಿಕಾರಿಗಳು | |
| 2 | ಶ್ರೀ. ರಾಜ್ ದುಗ್ಗಾರ್ | ಸಮಿತಿ ಸದಸ್ಯರು | |
| 3 | ಶ್ರೀಮತಿ. ಚಿತ್ರಾ ವೆಂಕಟೇಶ್ | ಸದಸ್ಯರು | |
| 4 | ಶ್ರೀ. ಅರವಿಂದ | ಸದಸ್ಯರು | |
| 5 | ಶ್ರೀ,ಲಕ್ಷ್ಮಣ (ಲಚ್ಚಿ) | ಸದಸ್ಯರು | |
| 6 | ಶ್ರೀ.ಜೆ.ಕೆ. ಶಿವಕುಮಾರ್ | ಸದಸ್ಯರು | |
| 7 | ಶ್ರೀ.ಎಲ್.ಮಾಧವನ್ | ಸದಸ್ಯರು | |
| 8 | ಶ್ರೀ. ಧರ್ಮರಾಜ್ ಜಿ ನಾಯಕ್ | ಸಹಾಯಕ ಅಭಿಯಂತರರು | |
| 9 | ಶ್ರೀ. ಮಹಮದ್ ಜಾವೇದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 10 | ಶ್ರೀಮತಿ ಪುಷ್ಪಾವತಿ | ಕಂದಾಯ ನಿರೀಕ್ಷಕರು | |
| 11 | ಶ್ರೀ.ರೇಣುಕಾಂಬ | ಹಿರಿಯ ಆರೋಗ್ಯ ನಿರೀಕ್ಷಕರು | |
| 12 | ಶ್ರೀ.ಜಯರಾಜು | ಕೆಲಸ ಪರಿವೀಕ್ಷಕರು | |
| 13 | ಶ್ರೀ.ಮೂರ್ತಿ | ಕಂದಾಯ ವಸೂಲಿಗಾರರು | |
| 14 | ಶ್ರೀ. ಶ್ಯಾಮ್ ಸುಂದರ್ | ಸಹಾಯಕ ಅಭಿಯಂತರರು ಸ್ಮಾರ್ಟ್ ಸಿಟಿ ಬೆಂಗಳೂರು | |

**ದಿನಾಂಕ:07-08-2021 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗೆಳು**

1) ಶ್ರೀ.ಧರ್ಮರಾಜ್.ಜಿ.ನಾಯಕ್ ಸಹಾಯಕ ಅಭಿಯಂತರರು ಸಮಿತಿ ಸಭೆಯ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಗೆ ಮಂಡಿಸಿದರು.

2) ದಿನಾಂಕ:17-07-2021 ರ ಸಭೆಯ ನಡಾವಳಿಗಳು ಹಾಗೂ ತೆಗೆದುಕೊಂಡು ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು. ಹಾಗೂ ಇಂದಿನ ಸಭೆಯಲ್ಲಿ ಚರ್ಚಿಸುವ ಸಂಬಂಧ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಲಾಯಿತು.

3) ಮಿಲ್ಲರ್ ರಸ್ತೆಲ್ಲಿನ BWSSB ವತಿಯಿಂದ ಪೈಪುಗಳನ್ನು ಬದಲಾಯಿಸುವ ಬಗ್ಗೆ ಸ್ಮಾರ್ಟ್ ಸಿಟಿ ಇಲಾಖೆಯ ಸಹಾಯಕ ಅಭಿಯಂತರರಾದ ಶ್ಯಾಮಸುಂದರ್‌ರವರು ವಿವರಣೆ ನೀಡಿದರು.

4) ಮಿಲ್ಲರ್ ರಸ್ತೆಯಲ್ಲಿ ವಿವಿಧ ಇಲಾಖೆಯವರ ಸಹಕಾರ ಇಲ್ಲದೆ ಕಾಮಗಾರಿಗಳು ಕುಂಟಿತಗೊಂಡಿವುದಾಗಿ ತಿಳಿಸಿದರು.

5) ಸಮಿತಿ ಸದಸ್ಯರಾದ ಶ್ರೀ.ಎಲ್,ಮಾಧವನ್ ರವರು ಪಾದಚಾರಿ ಮಾರ್ಗದಲ್ಲಿನ ಅತಿಕ್ರಮಣವನ್ನು ತೆರವುಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಿದರು.

6) ಸಮಿತಿ ಸದಸ್ಯರಾದ ಶ್ರೀ. ರಾಜ್‌ದುಗ್ಗಾರ್ ರವರು ಅರಮನೆ ರಸ್ತೆಯಲ್ಲಿ ಹನುಮಾನ್ ದೇವಸ್ಥಾನದಲ್ಲಿನ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸುತ್ತಾ, ರಸ್ತೆಯಲ್ಲಿ ಪಕ್ಕದಲ್ಲಿ ನೆಡುತ್ತಿರುವ ಸಸಿಗಳನ್ನು ಅಳವಡಿಸಲು ಸೂಚಿಸಿ, ಅರಮನೆ ರಸ್ತೆಯ ಮೌಂಟ್ ಕಾರ್ಮಲ್ ಕಾಲೇಜ್ ಎದುರುಗಡೆ ಪಾದಚಾರಿ ಮಾರ್ಗದಲ್ಲಿದ್ದ ಹಳೆಯ ನಾಮಫಲಕ ಮತ್ತು ಕಂಬಗಳನ್ನು ತೆರವುಗೊಳಿಸಿ ಪಾದಚಾರಿಗಳಿಗೆ ಓಡಾಡಲು ಅನುಕೂಲ ಮಾಡಿಕೊಡಲು ತಿಳಿಸಿದರು. ಮತ್ತು ಹಳೆಯ ಬೀದಿ ಹೆಸರುಗಳನ್ನು ಪುನರ್ ನಾಮಕರಣ ಮಾಡಲು ಸಹಲಹೆ ನೀಡಿದರು. ಮತ್ತು ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಕಡಿಮೆ ಬೆಳಕಿನ ಶಕ್ತಿ ಹೊಂದಿದ್ದು, ಹೆಚ್ಚು ಬೆಳಕಿನ ಸಾಮರ್ಥ್ಯದ ಎಲ್.ಇ.ಡಿ ಬೀದಿ ದೀಪಗಳನ್ನು ಪೈಲೆಟ್ ಪ್ರೋಜೆಕ್ಟ್‌ನಲ್ಲಿ ಅಳವಡಿಸಲು ಸಲಹೆ ನೀಡಿದರು.

7) ಸಮಿತಿ ಸದಸ್ಯರಾದ ಶ್ರೀ. ಲಕ್ಷ್ಮಣ ರವರು ಮಾತನಾಡಿ ಮಹಾವೀರ್ ಜೈನ್ ಆಸ್ಪತ್ರೆ ರಸ್ತೆಯ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ಸೂಚಿಸಿದರು. ಮತ್ತು ಬಿಬಿಎಂಪಿ ಕ್ವಾಟ್ರಸ್‌ಗೆ ಸುಮಾರು 13 ವರ್ಷಳಿಂದ ಬಾಡಿಗೆ ಕಟ್ಟದೆ ಇರುವ ಡಾಲಿ ಥಾಮಸ್ ರವರ ವಿರುದ್ದ ಬಗ್ಗೆ ಕಾನೂನು ರೀತ್ಯಾ ಕ್ರಮಕೈಗೊಳ್ಳಲು ಕಂದಾಯ ಇಲಾಖೆಯವರಿಗೆ ವಿವರಿಸಿದರು. ಮತ್ತು ಸದರಿಯವರ ನಡವಳಿಕೆ ಬಗ್ಗೆ ಆಕ್ಷೇಪಣೆ ಮಾಡುತ್ತಾ, ಸದರಿಯವರ ವಿರುದ್ದ ನೋಟಿಸ್ ಜಾರಿ ಮಾಡಲು ಆರೋಗ್ಯ ವೈದ್ಯಾಧೀಕಾರಿಗಳ ಗಮನ ಸೆಳೆದರು.

-3-

8) ಸಮಿತಿ ಸದಸ್ಯರಾದ ಶ್ರೀಮತಿ.ಚಿತ್ರಾ ವೆಂಕಟೇಶ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹಲವಾರು ರಸ್ತೆಗುಂಡಿಗಳಿದ್ದು ತಾತ್ಕಾಲಿಕವಾಗಿ WMM ಹಾಕಿರುವುದು ಮಳೆ ಬಂದಾಗ ಮತ್ತೆ ರಸ್ತೆ ಹಾನಿಯಾಗುವ ಸಂಭವವಿದ್ದು, ಶಾಸ್ವತವಾಗಿ ರಸ್ತೆಗುಂಡಿಗಳನ್ನು ಮುಚ್ಚಲು ಸೂಚಿಸಿದರು.

9) ಸಮಿತಿ ಸದಸ್ಯರಾದ ಶ್ರೀ.ಅರವಿಂದ್ ರವರು ಮಾತನಾಡಿ 2016 ರಿಂದ ಆಸ್ತಿ ತೆರಿಗೆಗಳನ್ನು ವಿವಿಧ ವಲಯಗಳಾಗಿ ವಿಂಗಡಿಸಿ ಹೆಚ್ಚುವರಿ ತೆರಿಗೆಯನ್ನು ವಸೂಲಿ ಮಾಡುತ್ತಿರುವ ಬಗ್ಗೆ ಕಂದಾಯ ನಿರೀಕ್ಷರಾದ ಶ್ರೀಮತಿ.ಪುಷ್ಪಾ ರವರಿಂದ ವಿವರಣೆ ಪಡೆದರು.

10) ಸಮಿತಿ ಸದಸ್ಯರಾದ ಶ್ರೀ.ಕೆ.ಜೆ.ಸಿ ಕುಮಾರ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ರಸ್ತೆಗಳನ್ನು ಅತಿಕ್ರಮಣ ಮಾಡಿರುವುದನ್ನು ತೆರವುಗೊಳಿಸಲು ಸೂಚಿಸಿದರು

11) ಸಭೆಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳು ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮಕೈಗೊಳ್ಳಲು ಆದೇಶಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು

R. Manjulamma
ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ